ಅದೊಂದು ಚಿಕ್ಕ ಮಳಿಗೆಯಂತ ನೆಲಮಾಳಿಗೆಗಳಲ್ಲಿ ಅಂಗಡಿಗಳಿರುವಂತ ಜಾಗ. ಫುಟ್‌ಪಾತಿನ ಮೇಲೆ ಹರಿದಾಡುವವರ ಕಣ್ಣು ಈ ಫಲಕದ ಮೇಲೆ ಹರಿದೂ ಯಾಕೆ ಅವರನ್ನೆಲ್ಲ ಹಿಡಿದಿಟ್ಟಿಲ್ಲ ಎಂದು ಅವಳಿಗೆ ಬಗೆಹರಿಯಲಿಲ್ಲ. ಆ ಬೋರ್ಡನ್ನು ಪೂರ್ತಿ ಕೂಡ ಓದುವ ವ್ಯವಧಾನವಿರಲಿಲ್ಲ. ಆಚೀಚೆ ನೋಡಿ ಸ್ವಲ್ಪ ಧೈರ್ಯ ವಹಿಸಿ ಆ ಬೋರ್ಡಿದ್ದ ಅಂಗಡಿಯಂತಿದ್ದ ಜಾಗದ ಬಾಗಿಲಲ್ಲಿ ಮೆಟ್ಟಿಲಿಳಿದು ಅರೆಗಾಜಿನ ಬಾಗಿಲು ದೂಡಿದಳು. ನೂರಾರು ವರ್ಷಗಳಿಂದ ಯಾರೂ ಒಳಬಂದಿಲ್ಲವೇನೋ ಎಂಬಂತ ಆಲಸ್ಯದಲ್ಲಿ, ಮೇಲೆ ಗಾಜು ಕೆಳಭಾಗದಲ್ಲಿ ಲೋಹದಂತಿದ್ದ ಸ್ವಾರ್ಮ್ ಡೋರ್, ತನ್ನ ಹಿಂಬದಿಗೆ ಕಟ್ಟಿದ್ದ ಕಿಂಕಿಣಿ ಗಂಟೆಗಳ ದನಿಸುತ್ತ, ಜೊತೆಗೆ ತನ್ನದೇ ತಗಡಿನ ಕಿರಿಕಿರಿಯಂಬಂತ ನಾದದೊಂದಿಗೆ ತೆರೆದುಕೊಂಡಿತು. ಇವಳು ಒಳಬರುತ್ತಿದ್ದಂತೆ, ಮತ್ತದೇ ಆಲಸ್ಯದಲ್ಲಿ ಮುಚ್ಚಿಕೊಂಡಿತು. ಪುಟ್ಟ ಹಜಾರದಂತಿದ್ದ ಆ ಜಾಗದಲ್ಲಿ, ಡಾಕ್ಟರ್ ಕ್ಲಿನಿಕ್ಕಿನಲ್ಲಿ ಹೊರಗೆ ಕಾಯುತ್ತ ಕುಳಿತಿರುವ ಜಾಗದಂತೆ ತೋರುತ್ತಿದ್ದ ಆ ಪುಟ್ಟ ಚೌಕಿಯಲ್ಲಿ ಇದ್ದಿದ್ದು ಎರಡು ಪ್ಲಾಸ್ಟಿಕ್ ಕುರ್ಚಿಗಳು. ಒಂದು ಮುಪ್ಪಾದ ಟೇಬಲ್ಲಿನ ಮೇಲೆ ಇದ್ದ ಹಳೆಯ ಮ್ಯಾಗಜೀನ್‌ಗಳು. ಅಲ್ಲಿ ಒಂದು ಪಾರ್ಟಿಷನ್‌ನಂತಿದ್ದ ಗೋಡೆ, ಅದಕ್ಕೊಂದು ಬಾಗಿಲು. ಇವಳಿಗೆ ಒಂದು ಕ್ಷಣ ಯಾಕೆ ತಲೆಕೆಟ್ಟವಳಂತೆ ಇಲ್ಲಿ ಬಂದಿದ್ದು ನಾನು, ಹಿಂತಿರುಗಿ ಹೋಗಲೇ ಎಂದೆನಿಸಿದರೂ, ಮತ್ತೆ ಧೈರ್ಯ ಮಾಡಿ, ಅಲ್ಲಿನ ಮಂದ ಬೆಳಕಿಗೆ ಕಣ್ಣು ಹೊಂದಿಸಿಕೊಳ್ಳುತ್ತಾ 'ಹಲೋ, ಎನಿಬಡೀ ಹೋಂ?' ಎಂದಳು. ಉತ್ತರವಿಲ್ಲ. ಮತ್ತೆಲ್ಲ ಮೌನ. ಏನಾದರಾಗಲಿ ಎಂದುಕೊಂಡು ಕುರ್ಚಿಯ ಮೇಲೆ ಕೂತಳು.

ಕೆಲ ನಿಮಿಷ ಬಳೆಯ ಸದ್ದೋ, ಗೆಜ್ಜೆ ಸದ್ದೋ ಎಂದು ನಿಖರವಾಗಿ ವಿಂಗಡಿಸಲಾಗದ ಸದ್ದಿನ ಹಿನ್ನೆಲೆಯಲ್ಲಿ ಹೆಂಗಸೊಬ್ಬಳು ಹೊರಬಂದಳು. ಅದು ಆಕೆಯ ಸೊಂಟದ ಪಟ್ಟಿಯಲ್ಲಿನ ಮಿಡ್ಲ್ ಈಸ್ಟ್ ಶೈಲಿಯ ಬೆಲ್ಲಿ ಡಾನ್ಸಿವರು ಸುತ್ತಿಕೊಳ್ಳುವ ಸ್ಕಾರ್ಫಿನ ತುದಿಯಲ್ಲಿದ್ದ ನಾಣ್ಯದಂತ ಬಿಲ್ಲೆಗಳ ಕಿಂಕಿಣಿ ಸದ್ದಾಗಿತ್ತು.

'ಹಲೋ.'

ಸಮುದ್ರ ಮಗುಚಿದಾಗ ಏಳುವ ಬಿಳಿ ನೊರೆಯಂತಹ ಬಣ್ಣದ ಮೊಗ. ಕಡುಗಪ್ಪು ಹುಬ್ಬಿನ ಬಾಗು, ಅಪ್ಪ ಗೋಕರ್ಣಕ್ಕೆ ಕರಕೊಂಡು ಹೋದಾಗ ಬೇಲೆ ಮೇಲೆ ಬಿದ್ದಿದ್ದವನನ್ನೆಲ್ಲ ಗಬಗಬನೆ ಆರಿಸಿಕೊಂಡಿದ್ದಂತ ಶಂಖದ ನೆನಪಾಗಿಸುವಂತಹ, ಬಿಳಿ ಶಂಖದಂತ ಕೊರಳು, ಶ್ರುತಿ ಇನ್ನೂ ನಿರುಕಿಸುತ್ತಿರುವಾಗಲೇ 'ವಾಟ್ ಕೆನ್ ಐ ಡೂ ಫಾರ್ ಯು' ಎಂದು ಭಾರವಾದ ಟರ್ಕಿಷ್ ರೀತಿಯ ಆಕ್ಸೆಂಟಿನಲ್ಲಿ ಶಂಖದ ಕೊರಳಿಂದ ಹೊರಬಂತು ಪ್ರಶ್ನೆ. ಶ್ರುತಿ ದಡಬಡಾಯಿಸಿ ಎದ್ದು, 'ಅದು... ಅದು... ನಿಮ್ಮ ಬೋರ್ಡು, ಕನಸುಗಳ ಮಾರಾಟ ಏನೂ ಅರ್ಥವಾಗದೆ, ಕುತೂಹಲದಿಂದ, ಒಂದು ಬಗೆಯ ಸೆಳೆತದಿಂದ ಇಲ್ಲಿ ಬಂದಿರುವೆ. ಏನಿದರ ಅರ್ಥ?'

ಮತ್ತೆ ಶಂಖ ಮುಗುಳ್ನಕ್ಕಿತು, 'ಒಳಗೆ ಬಾ, ನೀನೆ ನೋಡುವೆ'.

ಒಳ ಹೋದರೆ, ಮುಂಭಾಗದ ಇಕ್ಕಟ್ಟಿನ ಜಾಗ ನೋಡಿ ಊಹಿಸಲೂ ಆಗದಷ್ಟು ವಿಶಾಲ ಜಾಗ. ದೊಡ್ಡ ಹಜಾರ. ಗೋಡೆಗಾನಿಸಿ ಒಂದಷ್ಟು ವಾದ್ಯಗಳು.

'ನಾನು ಬೆಲ್ಲಿ ಡಾನ್ಸಿಂಗ್ ಕಲಿಸುತ್ತೇನೆ. ಇದೆ ನನ್ನ ಕನಸಿನ ರಾಜ್ಯ.'

ಶ್ರುತಿಗೆ ಏನೋ ಅನೂಹ್ಯವಾದದ್ದಿಲ್ಲಿದೆ ಎಂಬಂತ ನಿರೀಕ್ಷೆಯಲ್ಲಿ ಕೌತುಕದಿಂದ ಬಂದವಳಿಗೆ ಈ ಜಾಗದಲ್ಲೇನೋ ಸೆಳೆತವಿದೆ ಎನಿಸಿದರೂ, ಸಂಪೂರ್ಣ ಪಿಚ್ಚೆನಿಸಿತು. ಅದೇ ನಿರಾಶೆಯಲ್ಲಿ ಹೇಳಿಬಿಟ್ಟಳು.